ಸಿ.ಸಿ .ನಂ. 153/2023 ಪಿಡಬ್ಲೂಃ 1

ದಿನಾಂಕಃ 02-12-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

4. ನಾನು ಈಗ್ಗೆ ಸುಮಾರು 15 ವರ್ಷಗಳಿಂದ ಫಿರ್ಯಾದುದಾರ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ . ಆರೋಪಿಯು ನಮ್ಮ ಸಂಸ್ಥೆಯಲ್ಲಿ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಆ ರೀತಿ ಆರೋಪಿಯು ನಮ್ಮ ಸಂಸ್ಥೆಯಲ್ಲಿ ಅಂದಾಜು 8 ವರ್ಷಗಳವರೆಗೆ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಅಂದಾಜು 2020 ನೇ ಇಸವಿಯ ಜನೇವರಿ ತಿಂಗಳಿನಿಂದ ಆರೋಪಿಯು ಅನಧಿಕೃತವಾಗಿ ಗೈರು ಹಾಜರಾಗಿದ್ದರು . ನಮ್ಮ ಸಂಸ್ಥೆಯಲ್ಲಿ ಆರೋಪಿಯು ಹಣವನ್ನು ದುರುಪಯೋಗ ಮಾಡಿದ್ದರಿಂದ ಅವರು ಆ ರೀತಿ ಅನಧಿಕೃತವಾಗಿ ಗೈರು ಹಾಜರಾಗಿದ್ದರು . ಆ ರೀತಿ ಆರೋಪಿಯು ಅಂದಾಜು ಒಂದು ಕೋಟಿ ಚಿಲ್ಲರೆ ಹಣವನ್ನು ದುರುಪಯೋಗ ಮಾಡಿದ್ದರು . ಆ ಬಗ್ಗೆ ತನಿಖೆ ನಡೆದಿದ್ದು, ಸದರಿ ತನಿಖೆ ಅಂದಾಜು 2021 ಅಥವಾ 2022 ರಲ್ಲಿ ನಡೆದಿರಬಹುದು. ಕೆಡಿಸಿಸಿ ಬ್ಯಾಂಕಿನವರು ನಮ್ಮ ಶಾಖೆಗೆ ತಪಾಸಣೆಗೆ ಬಂದಾಗ ಆರೋಪಿಯು ಹಣ ದುರುಪಯೋಗ ಮಾಡಿರುವ ಬಗ್ಗೆ ಗೊತ್ತಾಯಿತು. ಆ ರೀತಿ ಕೆಡಿಸಿಸಿ ಬ್ಯಾಂಕಿನವರು ನಮ್ಮ ಶಾಖೆಗೆ ಅಂದಾಜು 2019 ನೇ ಇಸವಿಯ ಸಪ್ಟೆಂಬರ ಅಥವಾ ಡಿಸೆಂಬರ ತಿಂಗಳಿನಲ್ಲಿ ಬಂದು ತಪಾಸಣೆ ಮಾಡಿರುತ್ತಾರೆ. ಸದರಿ ಕೆಡಿಸಿಸಿ ಬ್ಯಾಂಕಿನವರು ಪ್ರತಿವರ್ಷವೂ ನಮ್ಮ ಶಾಖೆಯ ತಪಾಸಣೆ ಮಾಡುತ್ತಾರೆ . ಆ ರೀತಿ 2019 ನೇ ಇಸವಿಯಲ್ಲಿ ಕೆಡಿಸಿಸಿ ಬ್ಯಾಂಕಿನವರು ತಪಾಸಣೆಗೆ ಬಂದಾಗ ಪ್ರಥಮ ಬಾರಿಗೆ ಹಣ ದುರುಪಯೋಗ ಆಗಿರುವ ಬಗ್ಗೆ ಗೊತ್ತಾಯಿತು.

5. ನಮ್ಮ ಶಾಖೆಯ ವಾರ್ಷಿಕ ಆಯವ್ಯಯ ವರದಿಯನ್ನು ಶಾಖೆಯ ವ್ಯವಸ್ಥಾಪಕರೇ ತಯಾರಿಸುತ್ತಾರೆ. ಆ ರೀತಿ 2019 ನೇ ಇಸವಿಯಲ್ಲಿ ಕೆಡಿಸಿಸಿ ಬ್ಯಾಂಕಿನವರು ತಪಾಸಣೆಗೆ ಬಂದಾಗ ಸದರಿ ಹಣ ದುರುಪಯೋಗ 2018-2019 ನೇ ಸಾಲಿನಲ್ಲಿ ಆಗಿರುತ್ತದೆ ಎಂದು ಹೇಳಿರುತ್ತಾರೆ . ನಮ್ಮ

ಶಾಖೆಯಲ್ಲಿ ಪ್ರತಿವರ್ಷ ವಾರ್ಷಿಕ ಆಡಿಟ್ ಮಾಡಿಸುತ್ತೇವೆ . ಆರೋಪಿಯು ನಮ್ಮ ಶಾಖೆಯ ವ್ಯವಸ್ಥಾಪಕರಾಗಿದ್ದ ಸಂದರ್ಭದಲ್ಲಿ ನಮ್ಮ ಶಾಖೆಯ ಆಡಿಟ್ ನ್ನು ಪಿ ವಿ ಭಟ್ (ಪಿ ಯು ಭಟ್) ಹಾಗೂ ಅವರ ಹೆಂಡತಿಯಾದ ರಶ್ಮೀ ದಿಕ್ಷಿತ್ ಮಾಡುತ್ತಿದ್ದರು. ಮೇಲೆ ಹೇಳಿದ ವ್ಯಕ್ತಿಗಳು ಮಾಡಿರುವ ಆಡಿಟ್ ವರದಿಯಲ್ಲಿ ಹಣ ದುರುಪರ್ಯೋಗ ಆಗಿರುವ ಬಗ್ಗೆ ಹೇಳಿರುವುದಿಲ್ಲ. ಸದರಿ ಆಡಿಟ್ ವರದಿಯ ಒಂದು ಪ್ರತಿಯನ್ನು ಸಹಾಯಕ ನಿಬಂಧಕರು, ಕುಮಟಾ ಇವರಗೆ ಕಳುಹಿಸಬೇಕು ಎಂದರೆ ಸರಿ. ಅದೇ ರೀತಿ ಸದರಿ ಆಡಿಟ್ ವರದಿಯ ಇನ್ನೊಂದು ಪ್ರತಿ ನಮ್ಮ ಶಾಖೆಯಲ್ಲಿ ಇರುತ್ತದೆ ಎಂದರೆ ಸರಿ.

6. ಮೇಲೆ ಹೇಳಿದಂತೆ ಕೆಡಿಸಿಸಿ ಬ್ಯಾಂಕಿನವರು ನಮ್ಮ ಶಾಖೆಯಲ್ಲಿ ತಪಾಸಣೆ ಮಾಡಿದಾಗ ಕಂಡು ಬಂದ ದುರುಪಯೋಗದ ಹಣವಾದ ಸುಮಾರು ಒಂದು ಕೋಟಿ ಚಿಲ್ಲರೆ ಹಣವನ್ನು ಆರೋಪಿಯು ನಂತರ ನಮ್ಮ ಶಾಖೆಗೆ ಭರಣ ಮಾಡಿರುತ್ತಾರೆ . ಆ ರೀತಿ ಕೆಡಿಸಿಸಿ ಬ್ಯಾಂಕಿನವರು ನಮ್ಮ ಶಾಖೆಯಲ್ಲಿ ತಪಾಸಣೆ ಮಾಡಿರುವ ಬಗ್ಗೆ, ಅವರು ಒಂದು ಕೋಟಿ ಚಿಲ್ಲರೆ ಹಣ ದುರುಪಯೋಗ ಆಗಿರುವ ಬಗ್ಗೆ ಹೇಳಿರುವ ವಿಷಯವನ್ನು ಹಾಗೂ ಆರೋಪಿಯು ಸದರಿ ಹಣವನ್ನು ಭರಣ ಮಾಡಿರುವ ಕುರಿತು ಮೇಲೆ ಹೇಳಿದ ಸಹಾಯಕ ನಿಬಂಧಕರಿಗೆ ವರದಿ ಮಾಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಒಂದುವೇಳೆ ಆ ರೀತಿ ಸದರಿ ಸಹಾಯಕ ನಿಬಂಧಕರಿಗೆ ವರದಿ ಮಾಡಿದ್ದೇ ಆದಲ್ಲಿ ಆ ವಿಷಯ ನಮ್ಮ ಸಂಸ್ಥೆಯ ಕುಮಟಾದಲ್ಲಿರುವ ಪ್ರಧಾನ ಕಚೇರಿಯ ವ್ಯವಸ್ಥಾಪಕರಿಗೆ ಗೊತ್ತಿರುತ್ತದೆ. ಆರೋಪಿಯು ನಮ್ಮ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ನಮ್ಮ ಸಂಸ್ಥೆಯ ಹೆಗಡೆ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಆರೋಪಿಯು ದುರುಪಯೋಗ ಮಾಡಿದ್ದರು ಎಂದು ಹೇಳಿದ ಹಣವನ್ನು ಸಂಪೂರ್ಣವಾಗಿ ಭರಣ ಮಾಡಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ಸದರಿ ಹಣವನ್ನು ಆರೋಪಿಯು ದಿಃ 30-05-2020 ರ ಒಳಗೆ ಭರಣ ಮಾಡಿರುತ್ತಾರೆ. ಮೇಲೆ ಹೇಳಿದಂತೆ ಕೆಡಿಸಿಸಿ ಬ್ಯಾಂಕಿನವರು ನಮ್ಮ ಪ್ರಧಾನ ಕಚೇರಿಯಲ್ಲಿ ಮಾಡಿರುವ ತಪಾಸಣಾ ವರದಿ ನಮ್ಮ ಪ್ರಧಾನ ಕಚೇರಿಯಲ್ಲಿ ಇದೆ. ಸದರಿ ವರದಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ.

7. ಆರೋಪಿಯು ಮೇಲೆ ಹೇಳಿದಂತೆ ಭರಣ ಮಾಡಿದ್ದರು ಎಂದು ಹೇಳಿದ ಹಣವನ್ನು ಅವರು ಯಾವ ರೀತಿ ಭರಣ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ಭರಣ ಮಾಡಿದ ನಂತರ ನಮ್ಮ ಸಂಸ್ಥೆಯಲ್ಲಿ ಪ್ರತ್ಯೇಕವಾದ ಸಭೆಯನ್ನು ನಡೆಸಿ ಆರೋಪಿಯು ಹಣ ಭರಪಾಯಿ ಮಾಡಿರುತ್ತಾರೆ ಎಂದು ಠರಾವು ಆಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ಆ ರೀತಿ ಆರೋಪಿಯು ಹಣ ಅಪರಾ ತಪರಾ ಮಾಡಿರುತ್ತಾರೆ ಎಂದು ಮಿಟಿಂಗ್ ಕರೆಯಲಾಗಿದೆಯೋ ಇಲ್ಲವೋ ಎಂಬ ಬಗ್ಗೆ ನನಗೆ ನೆನಪಿಲ್ಲ . ಈ ಎಲ್ಲಾ ವಿಚಾರಗಳು ನಮ್ಮ ಪ್ರಧಾನ ಕಚೇರಿಯ ವ್ಯವಸ್ಥಾಪಕರಿಗೆ ಗೊತ್ತಿರುತ್ತದೆ . ನಮ್ಮ ಸದರಿ ಪ್ರಧಾನ ಕಚೇರಿಯಲ್ಲಿ ಈಗ ಯಾರೂ ಸಹ ವ್ಯವಸ್ಥಾಪಕರು ಇರುವುದಿಲ್ಲ , ಆದರೆ ಸದರಿ ಹುದ್ದೆಯನ್ನು ಪ್ರಭಾರಿ ನಾತೆಯಿಂದ ಜನೇವರ 2020 ರಿಂದ ನಾಗರಾಜ ಜಟ್ಟಪ್ಪ ನಾಯ್ಕರವರು ನಿರ್ವಹಿಸುತ್ತಿದ್ದಾರೆ. ಆ ರೀತಿ ಆರೋಪಿಯು ಹಣ ಅಪರಾ ತಪರಾ ಮಾಡಿದ್ದರು ಎಂದು ಹೇಳಿರುವ ಬಗ್ಗೆ ಸಭೆ ನಡೆದು ಠರಾವು ಆಗಿ ಅವರನ್ನು ಅಮಾನತ್ ನಲ್ಲಿ ಇಟ್ಟಿದ್ದಾರೆ ಎಂದರೆ ಸಾಕ್ಷಿಯು ಅವರನ್ನು ಅಮಾನತ್ ಮಾಡಲಾಗಿದೆ ಎಂದು ನುಡಿಯುತ್ತಾರೆ.

8. ಆರೋಪಿಯ ವಿರುದ್ಧ ಸಾಲಕ್ಕೆ ಸಂಬಂಧಪಟ್ಟಂತೆ ಪಂಚಾಯತ್ ದಾವೆಯನ್ನು ದಾಖಲಿಸಿರುತ್ತೇವೆ . ಸದರಿ ದಾವೆಯನ್ನು ಈಗ್ಗೆ ಸುಮಾರು ಒಂದು ವರ್ಷದ ಹಿಂದೆ ದಾಖಲಿಸಿದ್ದು , ಸಾಲಗಾರನಾದ ಮಂಜುನಾಥ ಹನುಮಂತ ನಾಯ್ಕ ತೀರಿ ಹೋಗಿದ್ದರಿಂದ ಸದರಿ ಪಂಚಾಯತ್ ದಾವೆ ಹಾಗೆಯೇ ಇರುತ್ತದೆ. ಆರೋಪಿಯ ವಿರುದ್ಧ ನಾವು ಕೋರ್ಟನಲ್ಲಿ ನಾಲ್ಕು ಚೆಕ್ ಅಮಾನ್ಯ ಪ್ರಕರಣಗಳನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿ . ಸದರಿ ನಾಲ್ಕು ಪ್ರಕರಣಗಳಲ್ಲಿಯೂ ಸಹ ಆರೋಪಿಯು ಜಾಮೀನುದಾರಾಗಿ ಚೆಕ್ ನ್ನು ಕೊಟ್ಟಿರುತ್ತಾರೆ ಎಂದು ಹೇಳಿರುತ್ತೇವೆ . ಇದೇ ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಸಿಸಿ ನಂ. 126/2023 ನ್ನು ದಾಖಲಿಸಿ, ಅದರಿಲ್ಲಿ ಆರೋಪಿಯು ತಿಮ್ಮಪ್ಪ ಹನುಮ ಪಟಗಾರ ರವರು ಪಡೆದುಕೊಂಡಿರುವ ಸಾಲಕ್ಕೆ ಜಾಮೀನುದಾರರೆಂದು ಹೇಳಿರುತ್ತೇವೆ ಎಂದರೆ ಸರಿ. ಅದೇ ರೀತಿ ಇದೇ ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಸಿಸಿ ನಂ. 122/2023 ನ್ನು ದಾಖಲಿಸಿ, ಅದರಲ್ಲಿ

ಪಿಡಬ್ಲೂಃ 1

ಆರೋಪಿಯು ರಾಮರಾಯ ಹನುಮಂತ ನಾಯ್ಕರವರು ಪಡೆದುಕೊಂಡಿರುವ ಸಾಲಕ್ಕೆ ಜಾಮೀನುದಾರರೆಂದು ಹೇಳಿರುತ್ತೇವೆ ಎಂದರೆ ಸರಿ . ಅದೇ ರೀತಿ ಇದೇ ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ಸಿಸಿ ನಂ. 62/2023 ನ್ನು ದಾಖಲಿಸಿ, ಅದರಲ್ಲಿ ಆರೋಪಿಯು ಶ್ರೀದೇವಿ ಗಣಪತಿ ಪಟಗಾರರವರು ಪಡೆದುಕೊಂಡಿರುವ ಸಾಲಕ್ಕೆ ಜಾಮೀನುದಾರರೆಂದು ಹೇಳಿರುತ್ತೇವೆ ಎಂದರೆ ಸರಿ . ಮೇಲೆ ಹೇಳಿದ ನಾಲ್ಕು ಸಾಲಗಳಿಗೆ ಸಂಬಂಧಪಟ್ಟಂತೆ ಪಂಚಾಯತಿ ದಾವೆಗಳು ಸಲ್ಲಿಸಲ್ಪಟ್ಟಿರುತ್ತೇವೆ. ಮೇಲೆ ಹೇಳಿದ ತಿಮ್ಮಪ್ಪ ಹನುಮ ಪಟಗಾರರವರು ಪಡೆದುಕೊಂಡಿರುವ ಸಾಲಕ್ಕೆ ದಾಖಲಿಸಿರುವ ಪಂಚಾಯತ್ ದಾವೆ ಡಿಕ್ರಿಯಾಗಿರುತ್ತದೆ.

9. ಮೇಲೆ ಹೇಳಿದ ಶ್ರೀದೇವಿರವರು ಪಡೆದುಕೊಂಡಿರುವ ಸಾಲಕ್ಕೆ ದಾಖಲಿಸಿರುವ ಪಂಚಾಯತ್ ದಾವೆ ನಡೆಯುತ್ತದೆ. ಮೇಲೆ ಹೇಳಿದ ಶ್ರೀದೇವಿ ರವರ ಸಾಲಕ್ಕೆ ಸಂಬಂಧಪಟ್ಟಂತೆ ಪಂಚಾಯತ್ ದಾವೆಯನ್ನು ದಾಖಲಿಸಿದ ನಂತರ, ಅದು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 64 ರ ಅಡಿಯಲ್ಲಿ ವಿಚಾರಣೆಗೆ ಬಂದಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ಮೇಲೆ ಹೇಳಿದ ಶ್ರೀದೇವಿಯವರ ಸಾಲಕ್ಕೆ ಸಂಬಂಧಪಟ್ಟ ಪ್ರಕರಣ ಮೇಲೆ ಹೇಳಿದ ಕಲಂ 64 ರಡಿಯಲ್ಲಿ ವಿಚಾರಣೆಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಅಪರಾ ತಪರಾ ಆಗಿತು ಎಂದು ಕಂಡು ಬಂದ ನಂತರ ಮೇಲೆ ಹೇಳಿದ ಕಲಂ ಅಡಿಯಲ್ಲಿ ಯಾವುದೇ ವಿಚಾರಣೆ ಆಗಿರುವುದಿಲ್ಲ . ಇಲ್ಲಿಯವರೆಗೂ ನಮ್ಮ ಹತ್ತಿರ ಕಲಂ 64 ರಡಿಯಲ್ಲಿ ವಿಚಾರಣೆ ಆಗಿ ಮಾಡಿರುವ ವರದಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

10. ಈ ಪ್ರಕರಣದ ಸಾಲಗಾರನಾದ ಮಂಜುನಾಥ ಹನುಮಂತ ನಾಯ್ಕರವರು ದಿಃ 14-03-2020 ರಂದು ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ . ನಿಪಿ-6 ಸಾಲದ ಅರ್ಜಿಯಲ್ಲಿ ಸಾಲಕ್ಕಾಗಿ ಅರ್ಜಿಯನ್ನು ದಿಃ 14-03-2020 ರಂದು ಸಲ್ಲಿಸಲಾಗಿದೆ ಎಂದು ನಮೂದು ಇದೆ . ಸಾಲಕ್ಕಾಗಿ ಠರಾವು ಮಾಡುವ ಸಭೆಯ ದಿವಸವೇ ಅವರು ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ . ವ್ಯವಸಾಯಕ್ಕೆ , ಕೃಷಿ ಉಪಕರಣ ಖರೀದಿಗೆ , ವ್ಯಾಪಾರಕ್ಕೆ , ಬಂಗಾರ ಹಾಗೂ ಆಸ್ತಿ ಒತ್ತೆ ಸಾಲವನ್ನು ನಮ್ಮ ಸಂಸ್ಥೆಯಿಂದ

ಕೊಡುತ್ತೇವೆ. ನಮ್ಮ ಸಂಘದ ನಿಯಮಾಳಿಗಳ ಪ್ರಕಾರ ಜಮೀನು ಖರೀದಿಗಾಗಿ ಸಾಲವನ್ನು ಕೊಡಲು ಬರುತ್ತದೆ. ಈ ಪ್ರಕರಣದಲ್ಲಿ ಯಾವ ಉದ್ದೇಶಕ್ಕಾಗಿ ಸಾಲವನ್ನು ಕೊಟ್ಟಿರುತ್ತೇವೆ ಎಂದು ನನಗೆ ಗೊತ್ತಿಲ್ಲ . ಈ ಕೇಸಿನ ಸಾಲ ಮಂಜೂರಾತಿ ಠರಾವನ್ನು ನಮ್ಮ ಮುಖ್ಯ ಕಚೇರಿಯಲ್ಲಿ ಮಾಡಿರುತ್ತಾರೆ . ಮೇಲೆ ಹೇಳಿದ ಉಳಿದ ಎಲ್ಲಾ ಸಾಲಗಳಿಗೂ ಸಹ ಒಂದೇ ದಿವಸ ಠರಾವು ಆಗಿರಬಹುದು , ಆದರೆ ನನಗೆ ಸರಿಯಾಗಿ ನೆನಪಿಲ್ಲ. ನಿಪಿ-6 ರಲ್ಲಿ 14-03-2020 ರಂದು ನಮ್ಮ ಪ್ರಧಾನ ಕಚೇರಿಯ ಮೇಲೆ ಹೇಳಿದ ಪ್ರಭಾರಿ ವ್ಯವಸ್ಥಾಪಕರಾದ ನಾಗರಾಜರವರು ನಮೂದು ಮಾಡಿರುತ್ತಾರೆ . ನಿಪಿ-6 ರಲ್ಲಿರುವ ''ಸದರಿಯವರಿಗೆ ಸಾಲ ತಿರುಗಿ ಕೊಡುವ ಸಾಮರ್ಥ್ಯ ಇರುವುದಿಲ್ಲ , ದಿಃ 14-03-2020 ಠರಾವು ನಂ. 4/5 '' ಇವುಗಳನ್ನು ಮೇಲೆ ಹೇಳಿದ ನಾಗರಾಜರವರು ಬರೆದಿರುತ್ತಾರೆ . ಆ ರೀತಿ ಸದರಿ ಸಾಲಗಾರನಿಗೆ ಸಾಲ ಮರು ಪಾವತಿ ಮಾಡುವ ಸಾಮರ್ಥ್ಯ ಇರುವುದಿಲ್ಲ ಎಂಬ ಬಗ್ಗೆ ಮೇಲೆ ಹೇಳಿದ ಠರಾವಿನಲ್ಲಿ ಇರುವುದಿಲ್ಲ . ಸಾಮಾನ್ಯವಾಗಿ ಸಾಲ ಮರು ಪಾವತಿ ಮಾಡುವ ಸಾಮರ್ಥ್ಯ ಇರುವ ವ್ಯಕ್ತಿಗಳಿಗೆ ಮಾತ್ರ ಸಾಲವನ್ನು ನೀಡಬೇಕಾಗುತ್ತದೆ ಎಂದರೆ ಸರಿ.

11. ಈ ಕೇಸಿನ ಸಾಲ 5 ವರ್ಷಗಳ ಅವಧಿಯ ಸಾಲವಾಗಿರುತ್ತದೆ . ನಿಪಿ-9 ರಿಂದ 13 ವಚನ ಪತ್ರಗಳಲ್ಲಿ ಸಾಲ ಮರುಪಾವತಿಯ ಪ್ರಪ್ರತ್ಯೇಕ ವಾಯಿದೆಯನ್ನು ತೋರಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ಸಾಲ ಮರುಪಾವತಿಗಾಗಿ ವಾರ್ಷಿಕ ಒಂದು ಕಂತಿನಂತೆ ಐದು ಕಂತುಗಳನ್ನು ನೀಡಲಾಗಿದೆ ಎಂದು ನುಡಿಯುತ್ತಾರೆ. ಸಾಲದ ಒಟ್ಟೂ ಮೊತ್ತ 19,50,000/- ರೂಪಾಯಿಯನ್ನು ಸಾಲಗಾರನಾದ ಮಂಜುನಾಥ ಹನುಮಂತ ನಾಯ್ಕರವರಿಗೆ ಅಕೌಂಟ್ ಪೇಯಿ ಚೆಕ್ ಮುಖಾಂತರ ಕೊಟ್ಟಿರುತ್ತೇವೆ . ಸದರಿ ಹಣವನ್ನು ಸಾಲಗಾರನಿಗೆ ದಿಃ 28-05-2020 ರಂದು ಕೊಟ್ಟಿರುತ್ತೇವೆ. ನಿಪಿ-8 ಸಾಲ ಸಂದಾಯ ಪಾವತಿಯಲ್ಲಿ ಚೆಕ್ ನಂಬರ ನಮೂದಾಗಿಲ್ಲ ಎಂದರೆ ಸರಿ . ಆ ರೀತಿ ಸದರಿ ಅಕೌಂಟ್ ಪೇಯಿ ಚೆಕ್ ನಂಬರನ್ನು ಮುಂದಿನ ವಾಯಿದೆಯ ದಿವಸ ತಂದು ಕೊಡುತ್ತೇನೆ .

ಪಿಡಬ್ಲೂಃ 1

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.